ಕುಂದಾಪುರದವರಾದ ಗೀತಾ ಈಗ ಬೆಂಗಳೂರು ನಿವಾಸಿ. ಕಥೆ, ಪ್ರಬಂಧಗಳನ್ನು ಬರೆಯುವ ಅವರು 'ಅಪ್ರಮೇಯ' ಎಂಬ ಕಥಾಸಂಕಲನ ಪ್ರಕಟಿಸಿದ್ದಾರೆ. ಜಪಾನ್ ಮತ್ತು ಆಸ್ಟ್ರೇಲಿಯಾ ಪ್ರವಾಸ ಕಥನ 'ದ್ವೀಪಗಳತ್ತ ಯಾನ' ಪ್ರಕಟವಾಗಿದೆ.

ಟ್ರಾಕಿಗೆ ಬರುತ್ತಿದ್ದಂತೆ ಪ್ರಭು ಪ್ರೋತ್ಸಾಹಿಸತೊಡಗಿದ. ಕೆಲವೊಮ್ಮೆ ಜವಾಬ್ದಾರಿಯುತನಂತೆ ಅಸಂಬದ್ಧ ನಿರ್ಣಯ ತೆಗೆದುಕೊಂಡು ತೊಂದರೆಗೆ ಸಿಲುಕಿಸುತ್ತಿದ್ದ. 'ನೋಡಿದ್ಯಾ ವಿದೂ... ನಮ್ಮ ಜ್ಯೋತಿಷಿ ಇದನ್ನೇ ಹೇಳಿದ್ದು ಗ್ರಹಚಾರ ಕಳೆದ ಮೇಲೆ ಎಲ್ಲಾ ಸರಿಯಾಗುತ್ತೆ ಅಂತ, ನಂದು ರಾಜಯೋಗವಂತೆ, ನಿಂದೂ ಇದರಲ್ಲಿ ಎಫರ್ಟ್ ಇದೆ ಅಂತ ಇಟ್ಕೊ' ಎನ್ನುತ್ತಿದ್ದ. ಪ್ರಭುವಿನ ಕೆಂಪು ಬಣ್ಣದ ಬಗ್ಗೆ ದ್ವೇಷ ಕಡಿಮೆಯಾದರೂ ಅವನೊಳಗೆ ಜ್ಯೋತಿಷಿ ಇನ್ನೂ ಇದ್ದಾನೆ ಎನಿಸುತಿತ್ತು.

'ವಿದೂ... ಇವತ್ತು ಸಂಜೆ 7 ಗಂಟೆಗೆ ರೋಟರಿ ಕ್ಲಬ್ಬಿಗೆ ಹೋಗ್ಬೇಕು ನೆನಪಿರಲಿ, ನಿಂಗೆ ಸನ್ಮಾನ ಇಟ್ಕೊಂಡಿದ್ದಾರೆ. ಹಾಂ... ನಮ್ಮ ವರ್ಕರ್ ಸತೀಶನ ತಂಗಿಯ ಮದುವೆಯಂತೆ. ಸಹಾಯ ಮಾಡಿ ಎಂದ, ಕೊಡದಿಲ್ಲ ಎಂದುಬಿಟ್ಟೆ. ದುಡ್ಡೇನು ಗಿಡದಲ್ಲಿ ಬೆಳಿತದಾ? ಆ ಪಾತ್ರೆಗಳ ಡಿಸೈನ್ ಚೇಂಜ್ ಮಾಡ್ಸಿದಿನಿ ಕಣೇ' ಏನೇನ್ನಲಿ ಫ್ಯಾಕ್ಟರಿಯ ಜವಾಬ್ದಾರಿಯೊಂದಿಗೆ ಗಂಡನನ್ನು ಸರಿತೂಗಿಸಿಕೊಂಡು ಹೋಗಲು ಎಕ್ಸ್‌ಟ್ರಾ ತಾಳ್ಮೆ, ಜಾಣ್ಮೆ ಬೇಕೆನಿಸಿತು. ಮತ್ತೆ ಮನ ಹೋರಾಟದ ದಿನಗಳತ್ತ ಉರುಳಿತು, ಕಷ್ಟದ ಜೀವನದಲ್ಲಿ ಬೆಳಕಿನ ಕಿರಣಗಳು ಬಿದ್ದ ದಿನಗಳು...

ಎಲ್ಲವೂ ಸಂತೋಷದಿಂದ ಸಾಗುವಾಗ ಸಮಯ ಸರಿದದ್ದು ತಿಳಿಯುವುದಿಲ್ಲ. ಮಗಳು ಓದಲು ವಿದೇಶಕ್ಕೆ ಹೋದರೆ ಮಗ ಕೆಲಸದ ಮೇಲೆ ಮುಂಬೈ ಸೇರಿದ. ಫ್ಯಾಕ್ಟರಿಯಲ್ಲಿ ಹೊಸ ಹೊಸ ಪ್ರಯೋಗ ಮಾಡುತ್ತಾ ಬಂದೆ. ಸ್ಟೀಲ್ ಪಾತ್ರೆಗಳು ಗಟ್ಟಿಮುಟ್ಟಿಗೆ ಹೆಸರುವಾಸಿ. ಆದರೆ, ಬಣ್ಣ ಆಕರ್ಷಕವಲ್ಲ. ಅದಕ್ಕಾಗಿ ಸ್ಟೀಲ್ ಪಾತ್ರೆಗಳ ಹೊರ ಮೈಗೆ ಬಣ್ಣ ಹಚ್ಚುವ ಪ್ರಯೋಗ ನಡೆಸಿದೆ. ಆಧುನಿಕ ಜನರ ಅಭಿರುಚಿಗೆ ತಕ್ಕಂತೆ ಹೊಸ ಹೊಸ ವಸ್ತುಗಳನ್ನು ಮಾರುಕಟ್ಟೆಗೆ ತರಲಾಯಿತು. ಎಲ್ಲವೂ ಒಂದು ನೆಲೆಗೆ ಬಂತು ಎನ್ನುವಾಗ ಈ ಹಾಳು ತಲೆನೋವು ಕಾಣಿಸಿಕೊಳ್ಳತೊಡಗಿತು 'ವಿದೂ... ಡಾ. ನರೇಶ್ ಹತ್ರ ಅಪಾಯಿಂಟ್ಮೆಂಟ್ ತಗೋತೀನಿ ಕಣೇ... ಒಂದು ಸಲ ತೋರಿಸಿ ಬಿಡು' ಎಂದು ಗಂಡ ಒತ್ತಾಯಿಸಿದರೂ ದಿನ ದೂಡಿದೆ.

ಇವತ್ತು ಯಾಕೋ ಬೆಳಿಗ್ಗೆಯಿಂದಲೇ ಸಹಿಸಲಾಗದ ತಲೆನೋವು. ಪ್ರಭುವಿನ ಹತ್ತಿರ ಹೇಳಿದರೆ ಎಲ್ಲಿಗೂ ಹೋಗಲು ಬಿಡೋದಿಲ್ಲ ಎನಿಸಿ ಹೇಳಲಿಲ್ಲ. ಪಕ್ಕನೆ ಏಳಲು ಹೋದಾಗ ತಲೆ ಬಾಗಿಲಿಗೆ ಬಡಿದದ್ದು ಮಾತ್ರ ಗೊತ್ತಾಯಿತು. ಕಣ್ಣು ತೆರೆದಾಗ ಆಸ್ಪತ್ರೆಯ ಬೆಡ್ಡಿನ ಮೇಲಿದ್ದೆ. ಪ್ರಭು ಮತ್ತು ಡಾ. ರೆಡ್ಡಿ ಮಾತಾಡಿಕೊಳ್ಳುತ್ತಿದ್ದರು: 'ವಿದ್ಯಾ ಮೇಡಂ ಅವರ ತಲೆಯಲ್ಲಿ ಚಿಕ್ಕ ಗಡ್ಡೆ ಬೆಳೆದಿದೆ. ಸ್ಕ್ಯಾನಿಂಗ್ ಮಾಡಿದಾಗಲೇ ಗೊತ್ತಾಗಿದ್ದು, ಕೂಡಲೆ ಆಪರೇಷನ್ ಮಾಡಬೇಕು'.

ಹತ್ತಾರು ಕೆಲಸದೊಂದಿಗೆ ಇದು ಬೇರೆ ಕರ್ಮ ಎನಿಸಿತು. ಆಪರೇಷನ್ ಮಾಡಿದರೂ ನಾಲ್ಕಾರು ದಿನಗಳಲ್ಲಿ ಮನೆಗೆ ಬರಬಹುದೇನೋ, ಈಗ ಸೈನ್ಸ್ ಬಹಳಷ್ಟು ಮುಂದುವರಿದಿದೆ. ಆದರೆ, ನಾನೆಣಿಸಿದಂತೆ ಆಗಲಿಲ್ಲ. ನನ್ನ ಬಿಪಿ ಏರುಪೇರಾಗತೊಡಗಿತು. ನಂತರ ಹಿಮೋಗ್ಲೋಬಿನ್ ಕಡಿಮೆ ಎಂದು ಗೊತ್ತಾಯಿತು. ಒಟ್ಟಿನಲ್ಲಿ ಅಪರೇಷನ್ ಮುಗಿಸಿ ಸುಧಾರಿಸಿಕೊಳ್ಳುವಷ್ಟರಲ್ಲಿ ಒಂದೂವರೆ ತಿಂಗಳು ಕಳೆದಿತ್ತು. ಮನೆಯಲ್ಲಿದ್ದರೆ ಫ್ಯಾಕ್ಟರಿ ಬಗ್ಗೆ ತಲೆ ಕೆಡಿಸಿಕೊಳ್ಳುವೆನೆಂದು ಆಸ್ಪತ್ರೆಯಲ್ಲೇ ಇರು ಎಂದರು. ನನಗೂ ಸರಿ ಎನಿಸಿತು. ಇದು ಮೊಬೈಲ್ ಜಮಾನ. ಮೊದ ಮೊದಲು ಗಂಟೆಗೊಮ್ಮೆ ಪ್ರಭು ಫೋನ್ ಮಾಡಿ ವಿಚಾರಿಸಿಕೊಳ್ಳುತ್ತಿದ್ದ. ದಿನಕ್ಕೆರಡು ಬಾರಿ ಆಸ್ಪತ್ರೆಗೆ ಬಂದು ಸಲಹೆ ಕೇಳುತ್ತಿದ್ದ. ನಿಧಾನವಾಗಿ ಗಂಡನ ಫೋನ್ ಬರುವುದು ಕಮ್ಮಿಯಾಯಿತು. ಎರಡು ದಿನಕ್ಕೊಮ್ಮೆ ಆಸ್ಪತ್ರೆಗೆ ಬರತೊಡಗಿದ, ಬಂದರೂ ಮುಖ ನೋಡಿ ಮಾತನಾಡುತ್ತಿರಲಿಲ್ಲ. ವನವಾಸದಂತಾಗಿದ್ದ ಆಸ್ಪತ್ರೆವಾಸ ಮುಗಿಸಿ ಒಬ್ಬಳೇ ಮನೆಗೆ ಬಂದೆ. ಕರೆಯಲು ಪ್ರಭು ಆಸ್ಪತ್ರೆಗೆ ಬಂದಿರಲಿಲ್ಲ.

ಮನೆಯ ಕಾಂಪೌಂಡ್ ಒಳಗಡೆ ಕಾಲಿಡುತ್ತಿದ್ದಂತೆ